ಕರ್ನಾಟಕ ವಿಧಾನ ಸಭೆ

ಬುಧವಾರ 21ನೇ ಜುಲೈ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ ರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

1. ಸಂತಾಪ ಸೂಚನೆ

ಮಾನ್ಯ ಸಭಾಧ್ಯಕ್ಷರು :

ಶ್ರೀ ಎಂ.ಎನ್. ಬಸವರಾಜಯ್ಯ

ಚಲನಚಿತ್ರ ನಿರ್ಮಾಣ ಕ್ಷೇತ್ರದ ದಿಗ್ಗಜ, ಖ್ಯಾತ ಉದ್ಯಮಿಯಾದ ಶ್ರೀ ಎಂ.ಎನ್. ಬಸವರಾಜಯ್ಯ ಅವರು ನಿಧನರಾಗಿರುವುದನ್ನು ವಿಷಾದದಿಂದ ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಎಂ.ಎನ್. ಬಸವರಜಯ್ಯ ಅವರು 1912 ರಲ್ಲಿ ಜನಿಸಿದ್ದರು. ಶ್ರೀಯುತರು ಪ್ರೌಢ ಶಿಕ್ಷಣದವರೆಗೆ ಮಾತ್ರ ಶಿಕ್ಷಣ ಪಡೆದಿದ್ದು, ಕರ್ನಾಟಕದಲ್ಲಿ ಕನ್ನಡ ಚಿತ್ರ ನಿರ್ಮಾಣವಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ 1954 ರಲ್ಲಿ ಮೈಸೂರಿನಲ್ಲಿ ಪ್ರೀಮಿಯರ್ ಸ್ಟುಡಿಯೋ ಸ್ಥಾಪಿಸಿದರು. ಕನ್ನಡ ಚಿತ್ರಗಳ ಬೆಳವಣಿಗೆಗೆ, ಸರ್ಕಾರದ ವತಿಯಿಂದ "ಸಹಾಯಧನ" ಪಡೆಯುವಲ್ಲಿ ಶ್ರಮವಹಿಸಿದರು.

ಶ್ರೀಯುತರು ಹಲವು ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಚಿತ್ರ ನಿರ್ಮಿಸುವ ಮೂಲಕ ಹೊಸ ಅಲೆಯನ್ನು ಹುಟ್ಟುಹಾಕಿದ್ದರು. ಶ್ರೀಯುತರು 1998ರಲ್ಲಿ ಡಾ॥ ರಾಜ್‌ಕುಮಾರ್ ಪ್ರಶಸ್ತಿಯನ್ನು ಪಡೆದಿದ್ದರು.

ಶ್ರೀಯುತರು ದಿನಾಂಕ 14ನೇ ಜುಲೈ, 2004 ರಂದು ನಿಧನ ಹೊಂದಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

†**ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಶ್ರೀ ಎಂ.ಎನ್. ಬಸವರಾಜಯ್ಯನವರು ಕನ್ನಡದ ಚಲನಚಿತ್ರ ರಂಗದಲ್ಲಿ ಬಹಳಷ್ಟು ಸೇವೆ ಸಲ್ಲಿಸಿದ್ದಾರೆ. 1954ರಲ್ಲಿ ಮೈಸೂರಿನಲ್ಲಿ ಪ್ರೀಮಿಯರ್ ಸ್ಟುಡಿಯೋವನ್ನು ಮಾನ್ಯ ಬಸವರಾಜಯ್ಯನವರು ಸ್ಥಾಪಿಸಿದರು. ಆಗ ಬೆಂಗಳೂರು ಹಾಗೂ ಮೈಸೂರಿನಲ್ಲಿ ಎಲ್ಲೂ ಕೂಡ ಸ್ಟುಡಿಯೋ ಇರಲಿಲ್ಲ. ಅಂತಹ ಕಾಲದಲ್ಲಿ 1954ರಲ್ಲಿ ಕನ್ನಡ ಚಿತ್ರದ ಬೆಳವಣಿಗೆ ಮಹತ್ವದ ಕಾಣಿಕೆ ನೀಡಿದ್ದಾರೆ. ಮದ್ರಾಸ್‌ನಲ್ಲಿ ನೆಲೆಗೊಂಡಿದಂತಹ ಕನ್ನಡ ಚಿತ್ರರಂಗ ಕರ್ನಾಟಕಕ್ಕೆ ಬರಲು ಎಂ.ಎನ್. ಬಸವರಾಜಯ್ಯನವರ ಪರಿಶ್ರಮ ಮುಖ್ಯ ಕಾರಣ. ಇವತ್ತು ಕರ್ನಾಟಕ ಸರ್ಕಾರದ ವತಿಯಿಂದ ಕನ್ನಡ ಚಿತ್ರಗಳಿಗೆ ಸಹಾಯಧನ ನೀಡಬೇಕೆನ್ನುವ ನಿಟ್ಟಿನಲ್ಲಿ ಅವರು ಸರ್ಕಾರದ ಮೇಲೆ ಸಾಕಷ್ಟು ಪ್ರಭಾವ ಬೀರಿ ಅದನ್ನು ಒದಗಿಸಿಕೊಟ್ಟಿದ್ದಾರೆ. ಚಲನಚಿತ್ರ ನಿರ್ಮಾಪಕರಾಗಿ, ಸ್ಟುಡಿಯೋ ಮಾಲೀಕರಾಗಿ, ಇವತ್ತು ಒಬ್ಬ ಉದ್ಯಮಿಯಾಗಿ ಅವರು ಬಿಟ್ಟು ಹೋಗಿರುವ ಪರಂಪರೆ ಉತ್ಕೃಷ್ಟವಾದುದು. ಮಾನ್ಯ ಎಂ.ಎನ್. ಬಸವರಾಜಯ್ಯನವರು ಸಲ್ಲಿಸಿದ ಸೇವೆಯನ್ನು ಇವತ್ತು ಈ ಸದನದಲ್ಲಿ ನೆನೆಸುತ್ತಿದ್ದೇವೆ. ತಾವು ಈ ಸದನದ ಮುಂದೆ ಸಂತಾಪ ಸೂಚನಾ ನಿರ್ಣಯವನ್ನು ಏನು ಇಟ್ಟಿದ್ದೀರಿ ಅಂತಹ ದಿಗ್ಗಜ ನಮ್ಮನ್ನು ಆಗಲಿ ಹೋಗಿದ್ದಾರೆ.

ಅವರ ಕುಟುಂಬದವರಿಗೆ ಅವರ ದುಃಖವನ್ನು ಭರಿಸುವ ಸಹನೆಯನ್ನು ಕೊಡಲೆ ಎಂದು ಹೇಳಿ. ಈ ಸದನದಲ್ಲಿ ತಿಳಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

†**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂತಹ ಸಂತಾಪ ಸೂಚನಾ ನಿರ್ಣಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಧ್ವನಿಗೂಡಿಸಿದ್ದಾರೆ. ಚಲನಚಿತ್ರ ನಿರ್ಮಾನ ಕ್ಷೇತ್ರದ ದಿಗ್ಗಜ ಶ್ರೀ ಎಂ.ಎನ್. ಬಸವ ರಾಜಯ್ಯನವರ ನಿಧನದಿಂದ ಚಲನಚಿತ್ರ ಉದ್ಯಮ ಬಡವಾಗಿದೆ ಎಂದರೆ ತಪ್ಪಾಗಲಾರದು. ಕಠಿಣ ಪರಿಶ್ರಮ. ಆ ಪರಿಶ್ರಮದಿಂದ ಏನಾದರೂ ಸಾಧನೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳುವುದಾದರೆ ನಿಜವಾಗಲೂ ನಾವು ಎಂ.ಎನ್. ಬಸವರಾಜಯ್ಯ ಅವರ ಜೀವನವನ್ನು ನಾವು ನೋಡಿದರೆ, ಅವರ ಚಟುವಟಿಕೆಯನ್ನು ಗಮನಿಸಿದರೆ ಇದರಿಂದ ನಮಗೆ ಅರ್ಥವಾಗುತ್ತದೆ. ಕನ್ನಡ ಚಲನಚಿತ್ರ ರಂಗಕ್ಕೆ ಒಂದು ಮೆರಗನ್ನು ಒಂದು ಸ್ಥಾನಮಾನವನ್ನು ಕಲ್ಪಿಸಿಕೊಟ್ಟಂತಹ ಮಹಾನ್ ವ್ಯಕ್ತಿ ದಿವಂಗತ ಎಂ.ಎನ್. ಬಸವರಾಜಯ್ಯನವರು. ಅವರು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದರು. ಕನ್ನಡ ಚಿತ್ರ ಉದ್ದಿಮೆಯನ್ನು ಬೆಳೆಸುವುದಕ್ಕೆ ತನ್ನ ಜೀವನವನ್ನು ಪಣವಾಗಿ ಇಟ್ಟರು. ಅಂತಹ ವ್ಯಕ್ತಿ ಇವತ್ತು ದೈವಾಧೀನರಾಗಿ ಈ ಕ್ಷೇತ್ರ ಬಡವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಆ ಸ್ಥಾನವನ್ನು ಭರ್ತಿ ಮಾಡುವವರು ಎಷ್ಟು ಜನ ಇದ್ದಾರೆ ಎಂಬುದು ಗೊತ್ತಿಲ್ಲ, ಈ ಒಂದು ಚಲನಚಿತ್ರ ರಂಗವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವಂತಹ ಕೆಲಸ ಮಾಡಬೇಕಾಗಿದೆ. ಆ ಕೆಲಸವನ್ನು ಅವರಿಂದ ಪ್ರೇರಣೆ ಪಡೆದು, ಸ್ಫೂರ್ತಿ ಪಡೆದು ಅದನ್ನು ಉಳಿದವರು ಮಾಡಲಿ ಎಂದು ಆಶಿಸಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ತಮಗೆ ವಂದಿಸಿ ನನ್ನ ಮಾತನ್ನು ವ ಗಿಸುತ್ತೇನೆ.

†**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ)** : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸವೇ ಬಸವರಾಜಯ್ಯನವರ ಬಗ್ಗೆ ಇಲ್ಲಿ ಸಂತಾಪ ಸೂಚನೆ ಸಭೆಯಲ್ಲಿ ಬರುತ್ತದೆ ಎಂದು ತಿಳಿದುಕೊಂಡಿದ್ದೆ. ಬಹುಶಃ ಮಾನ್ಯ ಬಸವರಾಜಯ್ಯನವರು ಮೈಸೂರಿನಲ್ಲಿ ಇದ್ದವರಿಗೆ ಚೆನ್ನಾಗಿ ಗೊತ್ತು. ಅವರು ಮಾಡಿದಂತಹ ಪ್ರೇಮಿಯರ್ ಸ್ಟುಡಿಯೋ ಇಡೀ ರಾಜ್ಯದಲ್ಲಿ ಬಹಳ ಪ್ರಮುಖವಾದಂತಹ ಸ್ಟುಡಿಯೋ. ಸ್ಟುಡಿಯೋಗಳನ್ನು ಮಾಡುವುದು ಕೈ ಸುಟ್ಟುಕೊಳ್ಳುವುದು, ಸಾಲಸೋಲ ಮಾಡುವುದು, ಇಂತಹ ಕಾಲದಲ್ಲಿ ದೊಡ್ಡ ಸಾಹಸವನ್ನು ಅವರು ಮಾಡಿದರು. ಆ ಸ್ಟುಡಿಯೋದಿಂದ ಇಡೀ ರಾಜ್ಯದ ಅನೇಕ ಭಾಗಗಳು ಪ್ರಪಂಚಕ್ಕೆ ಗೊತ್ತಾಗುವ ಹಾಗೆ ಆಗಿತ್ತು. ಬಹುಶಃ ಅಭಿಮಾನ ಸ್ಟುಡಿಯೋ ಏನು ಮಾಡಿದ್ದರು ಅದು ಬಿಟ್ಟರೆ ಪ್ರೇಮಿಯರ್ ಸ್ಟುಡಿಯೋ ಅದಕ್ಕಿಂತ ಮೊದಲು ಇದ್ದಂತಹ ಸ್ಟುಡಿಯೋ, ನಾಟಕಗಳನ್ನು ನಡೆಸುವುದು, ಸ್ಟುಡಿಯೋಗಳನ್ನು ನಡೆಸುವುದು ಕರ್ನಾಟಕ ರಾಜ್ಯದಲ್ಲಿ ಬಹಳ ಪರಿಶ್ರಮದ ಕೆಲಸ. ಅಂತಹ ಕಾಲದಲ್ಲಿ ಕೂಡ ಅವರು ಅನೇಕ ದಶಕಗಳ ಕಾಳ ಈ ಸ್ಟುಡಿಯೋಗಳನ್ನು ಮೈಸೂರಿನಲ್ಲಿ ಅವರು ನಡೆಸಿಕೊಂಡು ಬಂದರು. ಆ ಭಾಗ ಏನಿತ್ತು, ಅದನ್ನು ನಾವು ಪ್ರೇಮಿಯರ್ ಸ್ಟುಡಿಯೋ ಏರಿಯಾ ಎಂದೇ ನಾವು ಮೈಸೂರಿನಲ್ಲಿ ಇದ್ದವರು ಕರೆಯುವ ಸ್ಥಿತಿ ಇತ್ತು. ಮತ್ತು ಕನ್ನಡದ ಚಲನಚಿತ್ರ ಕ್ಷೇತ್ರಕ್ಕೆ ತಮ್ಮದೇ ಆದಂತಹ ರೀತಿಯಲ್ಲಿ ಬಹಳಷ್ಟು ಸೇವೆಯನ್ನು ಅವರೇನು ಮಾಡಿದ್ದಾರೆ ಅದನ್ನು ಸ್ಮರಿಸಿಕೊಂಡು ಅವರು ಮಾಡಿದ ಸೇವೆಗೆ ರಾಜ್ಯ ಸರ್ಕಾರ ಯಾವುದೇ ರೀತಿಯಲ್ಲಿ ನೆರವಿಗೆ ಬರಬೇಕು ಎಂದು ಕೇಳಿಕೊಂಡು ಅದರ ಕುಟುಂಬ ವರ್ಗದವರಿಗೆ ಅವರು ಅಗಲಿದ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಎಂದು ಪಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಶ್ರೀ ಎಂ.ಎನ್. ಬಸವರಾಜಯ್ಯನವರು, ಕನ್ನಡ ಚಲನಚಿತ್ರರಂಗದ ಮಹಾವ್ಯಕ್ತಿ, ಈ ಕನ್ನಡ ಚಲನಚಿತ್ರರಂಗ ಮದ್ರಾಸ್ ನಲ್ಲಿತ್ತು, 1956, 1958ರಲ್ಲಿ ಸಂಪೂರ್ಣವಾಗಿ ಎಲ್ಲಾ ಕನ್ನಡ ಚಿತ್ರಗಳ ತಯಾರಿಕೆ ಮದ್ರಾಸ್‌ನಲ್ಲಿ ಆಗುತ್ತಿತ್ತು. ಕನ್ನಡ ಚಲನಚಿತ್ರಗಳನ್ನು ಕರ್ನಾಟಕದಲ್ಲಿ ತಯಾರು ಮಾಡಬೇಕೆಂದು ಹೇಳಿ, ಮದ್ರಾಸ್ ನಲ್ಲಿ ನೆಲಸಿ ಚಿತ್ರ ತಯಾರು ಮಾಡುವವರು ಕರ್ನಾಟಕದಲ್ಲಿ ಬಂದು ನೆಲಸಬೇಕೆಂದು, ಇಲ್ಲಿ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಡುತ್ತೇವೆಂದು ಪ್ರಪ್ರಥಮವಾಗಿ ಅದು ಮೈಸೂರಿನಲ್ಲಿ "ನವಜ್ಯೋತಿಸ್ಟುಡಿಯೋ" ಎಂದು ಇತ್ತು, ಅದಾದನಂತರ, "ಪ್ರೀಮಿಯರ್ ಸ್ಟುಡಿಯೋ"ವನ್ನು ಶ್ರೀ ಎಂ.ಎನ್. ಬಸವರಾಜಯ್ಯನವರು ಮಾಡಿದರು. ಶ್ರೀ ಡಿ. ಶಂಕರಸಿಂಗ್‌ರವರು ಅವರ ಜೊತೆಯಲ್ಲಿದ್ದರು. ಬಹುಶಃ ಆ ಕಾಲದಲ್ಲಿ ಅಪ್ಪಟ್ಟವಾದಂತಹ ಕನ್ನಡ ಚಲನಚಿತ್ರಗಳನ್ನು ಹದಿನಾರಣೆ, ನೂರಕ್ಕೆ ನೂರು, ಕನ್ನಡ ಚಿತ್ರಗಳನ್ನು ತೆಗೆದಂಥಾದ್ದು ಈ ಬಸವರಾಜಯ್ಯನವರ ಪ್ರೀಮಿಯರ್ ಸ್ಟುಡಿಯೋ ಆಗಿದೆ. ಸರ್ಕಾರ ಆ ಸಂದರ್ಭದಲ್ಲಿ ಮೊದಲನೆಯದಾಗಿ ಐವತ್ತು ಸಾವಿರ ರೂಪಾಯಿಗಳ ಸಹಾಯಧನವನ್ನು ನೀಡಲು ಆರಂಭಿಸಿತು. ಇಡೀ ಕನ್ನಡ ಚಲನಚಿತ್ರರಂಗ ಮದ್ರಾಸ್‌ನಿಂದ ಕರ್ನಾಟಕಕ್ಕೆ ಬರಬೇಕಾಯಿತು. ಇದು ಕರ್ನಾಟಕಕ್ಕೆ ಬಂದಮೇಲೆ, "ಪ್ರೀಮಿಯರ್ ಸ್ಟುಡಿಯೋ" ದಲ್ಲಿ ಸಮಗ್ರವಾಗಿ ಕನ್ನಡ ಚಲನಚಿತ್ರಗಳ ಬೆಳವಣಿಗೆ, ಕನ್ನಡ ಚಿತ್ರಗಳು ಸ್ವಲ್ಪ ಹೆಚ್ಚು ಕಡಿಮೆ ಅಲ್ಲಿ ಸಂಪೂರ್ಣವಾಗಿ ತಯಾರು ಆಯಿತು. ಅದರಲ್ಲಿ ಶ್ರೀ ಡಿ. ಶಂಕರ್‌ಸಿಂಗ್‌ರವರು ಮಾಡಿದಂತಹ ಅಪಾರವಾದಂತಹ, ಕೆಲಸ ಶ್ರೀ ಎಂ.ಎನ್. ಬಸವರಾಜಯ್ಯ, ಮತ್ತು ಶ್ರೀ ಡಿ. ಶಂಕರಸಿಂಗ್‌ರವರು ಜೋಡಿ. ಇದು ಆದನಂತರ ಅನೇಕ ಸ್ಟುಡಿಯೋಗಳು ಬಂದವು, ಅವು ಶ್ರೀ ಕರಿಬಸವಯ್ಯನವರು "ಕಂಠೀರವ ಸ್ಟುಡಿಯೋ"ವನ್ನು ಮಾಡಿದರು. ಈ ರೀತಿಯಾಗಿ ಅನೇಕ ಸ್ಟುಡಿಯೋಗಳು ಬಂತು ಪ್ರಪ್ರಥಮವಾಗಿ ಶ್ರೀ ಟಿ.ಎನ್. ಬಾಲಕೃಷ್ಣರವರು "ಅಭಿಮಾನ್ ಸ್ಟುಡಿಯೋ"ವನ್ನು ಮಾಡಿದರು. ಹೀಗೆ ಪ್ರಪ್ರಥಮವಾಗಿ ಅದರಲ್ಲೂ ಮೈಸೂರಿನಲ್ಲಿ ಒಂದು ಸುಸಜ್ಜಿತವಾದಂತಹ ಸ್ಟುಡಿಯೋವನ್ನು ಶ್ರೀ ಎಂ.ಎನ್. ಬಸವರಾಜಯ್ಯನವರು ಮಾಡಿದಂಥವರು. ಸುಮಾರು ನೂರಾರು ಕನ್ನಡ ಚಲನಚಿತ್ರಗಳಿಗೆ ಇವರು ಆಶ್ರಯದಾತರಾಗಿ, ಕನ್ನಡ ಚಿತ್ರದ ಸಮಗ್ರ ಬೆಳವಣಿಗೆಗೆ ಅಪಾಯವಾದಂತಹ ಕೆಲಸವನ್ನು ಮಾಡಿದಂಥವರು, ಸಿನಿಮಾ ನಟರಿಗೆ ಎಷ್ಟು ಕೀರ್ತಿ, ಪ್ರತಿಷ್ಠೆ ಇದೆಯೋ, ಅದಕ್ಕಿಂತ ಹೆಚ್ಚಿನ ಭಾಗ ಈ "ಪ್ರೀಮಿಯರ್ ಸ್ಟುಡಿಯೋ"ದ ಮಾಲೀಕ ಶ್ರೀ ಎಂ.ಎನ್. ಬಸವರಾಜಯ್ಯನವರಿಗೆ, ಸಲ್ಲಬೇಕಾದ್ದು. ಬಹುಶಃ ನನಗೆ ಅನಿಸುವುದೇನೆಂದರೆ, ಎಷ್ಟೋ ಜನ ನಿರ್ಮಾಪಕರುಗಳು, ಆವತ್ತಿನ ಕಾಲದಲ್ಲಿ ಆ ಸ್ಟುಡಿಯೋದ ಆಶ್ರಯದಿಂದ ಬೆಳವಣಿಗೆ, ಒಂದು ರೀತಿಯಲ್ಲಿ ಕನ್ನಡ ಚಿತ್ರಗಳು ಕರ್ನಾಟಕ ರಾಜ್ಯದಲ್ಲಿ ಸಮಗ್ರ ಬೆಳವಣಿಗೆಯಾಗಲು ಶ್ರೀ ಎಂ.ಎನ್. ಬಸವರಾಜಯ್ಯನವರ ಕೊಡುಗೆ ಅಪಾರವಾದ್ದು. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುವುದೇನೆಂದರೆ, ಈಗ ಅನೇಕ ಸಿನಿಮಾ ನಟರುಗಳಿಗೆ ಪ್ರಶಸ್ತಿಗಳೆನ್ನು ಕೊಡುತ್ತೀರಿ. ಬೇರೆ ಬೇರೆ ಪ್ರಶಸ್ತಿಗಳನ್ನು ಕೊಡುತ್ತಿದ್ದೀರಿ, ಈಗ ನಾನು ಹೇಳುವಂಥಾದ್ದು ಶ್ರೀ ಎಂ.ಎನ್. ಬಸವರಾಜಯ್ಯನವರ ಹೆಸರಿನಲ್ಲಿ ಕನಿಷ್ಟ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳಂತೆ, ಅವರ ಹೆಸರು ಉಳಿಯುವಂತಹ, ಶಾಶ್ವತವಾದಂತಹ ಪ್ರಶಸ್ತಿಯನ್ನು ಪರಿಣಾಮಕಾರಿಯಾದಂತಹ ಒಂದು ಉತ್ತಮ ಚಿತ್ರಗಳನ್ನು ತೆಗೆಯುವಂತಹ ನಿರ್ಮಾಪಕರುಗಳಿಗೆ ಕೊಡುವಂತಹ ವ್ಯವಸ್ಥೆ, ತಮ್ಮ ಕಾಲದಲ್ಲಿ ಆಗಬೇಕೆಂದು

ಹೇಳುತ್ತೇನೆ. ಇಲ್ಲಿ ಶ್ರೀ ಎಂ.ಎನ್. ಬಸವರಾಜಯ್ಯನವರ ಹೆಸರು ಉಳಿಯಬೇಕು, ಅವರು ಎಷ್ಟು ಕಷ್ಟಪಟ್ಟು ಆ ಸ್ಟುಡಿಯೋವನ್ನು ಮಾಡಿದ್ದಾರೆಂದರೆ, ಈ ನಾಡಿಗೆ, ಕನ್ನಡ ಚಲನಚಿತ್ರಕ್ಕೆ, ಅಪಾರವಾದಂತಹ ಸೇವೆಯನ್ನು ಮಾಡಿದ್ದಾರೆ, ಇವರ ಬಗ್ಗೆ ಹೇಳುತ್ತಾ ಹೋದರೆ, ಅನೇಕ ವಿಚಾರಗಳು ಇವೆ. ಆದರೆ ಇವತ್ತು ಸಂಕ್ಷಿಪ್ತವಾಗಿ ತಮ್ಮ ಮೂಲಕ ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಶ್ರೀ ಎಂ.ಎನ್. ಬಸವರಾಜಯ್ಯನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಕೊಡುವುದನ್ನು ಆರಂಭಿಸಬೇಕೆಂದು ಹೇಳಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೆ, ಶ್ರೀ ಎಂ.ಎನ್. ಬಸವರಾಜಯ್ಯನವರು, ಪ್ರಪ್ರಥಮ ಬಾರಿಗೆ ಮೈಸೂರಿನಲ್ಲಿ "ಪ್ರೀಮಿಯರ್ ಸ್ಟುಡಿಯೋ"ವನ್ನು ಮಾಡಿದರು, ಎಂದು ಇದೆ, ಇದು ಅಷ್ಟೆ ಅಲ್ಲ. ಇಡೀ ದಕ್ಷಿಣ ಭಾರತದ ಚಲನಚಿತ್ರೋದ್ಯಮ ಅದರ ಕೇಂದ್ರ ಮದ್ರಾಸ್ ಆಗಿತ್ತು. ಬರೀ ಕರ್ನಾಟಕ ರಾಜ್ಯದ್ದು ಮಾತ್ರವಲ್ಲ, ಆಂಧ್ರ ಪ್ರದೇಶ, ಕೇರಳ ರಾಜ್ಯ, ಎಲ್ಲಾ ರಾಜ್ಯಗಳ ಚಿತ್ರಗಳ ತಯಾರಿಕೆಯ ಕೇಂದ್ರ ತಮಿಳುನಾಡು ಆಗಿತ್ತು. ಅಂತಹ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ, ದಕ್ಷಿಣ ಭಾರತಕ್ಕೆ ತನ್ನದೇ ಆದಂತಹ ಸ್ವತಃ ಚಿತ್ರಗಳ ನಿರ್ಮಾಣದ ಸ್ಟುಡಿಯೋವನ್ನು ಮಾಡಿದ್ದು, ಶ್ರೀ ಎಂ.ಎನ್. ಬಸವರಾಜಯ್ಯನವರಿಗೆ ಆ ಕೀರ್ತಿ ಸಲ್ಲಬೇಕಾಗುತ್ತದೆ. ಅದರ ಪರಿಣಾಮವಾಗಿ ಕರ್ನಾಟಕದಲ್ಲಿ ಸಾಂಸ್ಕೃತಿಕವಾದಂತಹ, ಒಂದು ಒಳ್ಳೆಯ ವಾತಾವರಣ [illegible] ಸಾಧ್ಯವಾಗಲು ನಾಂದಿಹಾಡಿದವರು ಶ್ರೀ ಎಂ.ಎನ್. ಬಸವರಾಜಯ್ಯನವರು. ಅದನ್ನು ಮತ್ತೆ ಅಭಿವೃದ್ಧಿ ಪಡಿಸುವಂಥಾದ್ದಕ್ಕೆ, ಅವರು ಪಟ್ಟಂತಹ ಶ್ರಮ, ಮತ್ತು ಕಷ್ಟ, ಏನೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ನಾವೆಲ್ಲರೂ ಸುಲಭವಾಗಿ ಹೇಳಬಹುದು. ಆದರೆ ಅವರು ಪ್ರಾರಂಭದಲ್ಲಿ ಪಟ್ಟಿರುವಂತಹ ಕಷ್ಟಗಳು, ಎಷ್ಟೆಂದು ನಾವು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅದನ್ನು ಬೆಳೆಸಿ, ಉಳಿಸಿ, ಕನ್ನಡ ಚಲನಚಿತ್ರ ಉದ್ಯಮವನ್ನು, ಕರ್ನಾಟಕ ರಾಜ್ಯದಲ್ಲಿ ತನ್ನ ಸ್ವಂತಹ ಕಾಲಿನ ಮೇಲೆ ನಿಲ್ಲುವಂತಹ ಕೆಲಸವನ್ನು ಮಾಡಿದಂತಹ ಪ್ರಪ್ರಥಮವಾದ ವ್ಯಕ್ತಿಯಾಗಿದ್ದಾರೆ. ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥಾದ್ದು, ನಮ್ಮ ಎಲ್ಲರ ಕರ್ತವ್ಯವಾಗಿದೆ. ಅವರಿಗೆ ಸೂಕ್ತವಾದಂತಹ ಗೌರವವನ್ನು ಕೊಡುವುದಕ್ಕೆ ಅವರ ಜ್ಞಾಪಕಾರ್ಥವಾಗಿ ಸರ್ಕಾರ ಯಾವುದಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು, ತಮ್ಮಲ್ಲಿ ವಿನಂತಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ದಿವಂಗತರಾದ ಶ್ರೀ ಎಂ.ಎನ್. ಬಸವರಾಜಯ್ಯರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ನಿರ್ಣಯವನ್ನು ಮೃತ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.